# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1164
02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
03. ಉತ್ತರಿಸುವ ದಿನಾಂಕ : 23-12-2021.
04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು.

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮತ್ತೆ ಛಾಪಾ ಕಾಗದ ಹಗರಣ ಮತ್ತು ನಕಲಿ ಇ-ಸ್ಟ್ಯಾಂಪ್ ಪೇಪರ್‌ಗಳ ಮಾರಾಟ ದಂಧೆ ತಲೆ ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, |
| ಆ) | ಹಾಗಿದ್ದಲ್ಲಿ, ನಕಲಿ ಛಾಪಾ ಕಾಗದ ಮತ್ತು ನಕಲಿ ಇ-ಸ್ಟ್ಯಾಂಪ್ ಪೇಪರ್‌ಗಳ ಮಾರಾಟ ದಂಧೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು: | ನಕಲಿ ಛಾಪಾ ಕಾಗದ ಹಗರಣ ಮತ್ತು ನಕಲಿ ಇ-ಸ್ಟ್ಯಾಂಪ್ ಪೇಪರ್‌ಗಳ ಮಾರಾಟ ದಂಧಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಳ್ಳುತ್ತಿದೆ.<br>• ಇಂತಹ ಚಟುವಟಿಕೆಗಳಲ್ಲಿ ಭಾಗಿಯಾದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತದೆ.<br>• ಬೀಟ್ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಬೀಟ್ ವ್ಯಾಪ್ತಿಯಲ್ಲಿ ಮತ್ತು ಕೋರ್ಟ್ ಸುತ್ತಮುತ್ತ ಸದರಿ ದಂಧೆ ಮಾಡುವವರ ವಿರುದ್ಧ ನಿಗಾವಹಿಸುವಂತೆ ಸೂಕ್ತ ನಿರ್ದೇಶನ ನೀಡಲಾಗಿದೆ.<br>• ಪೊಲೀಸ್ ಠಾಣಾ ಸರಹದ್ದುಗಳಲ್ಲಿ ನಡೆಸುವ ಜನಸಂಪರ್ಕ ಸಭೆ, ಮೊಹಲ್ಲಾ ಸಭೆ, ಗ್ರಾಮ ಸಭೆಗಳಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುತ್ತಿದ್ದು. ಇಂತಹ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದಲ್ಲಿ ಕಾನೂನು ರೀತಿಯಲ್ಲಿ ಅನುಭವಿಸಬಹುದಾದ ತೊಂದರೆಗಳನ್ನು ವಿವರಿಸಿ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ. |

<table>
<tr>
<td>ಇ)</td>
<td>ರಾಜ್ಯದಲ್ಲಿ ಎಲ್ಲೆಲ್ಲಿ ಇಂತಹ ಪ್ರಕರಣಗಳು ಪತ್ತೆಯಾಗಿವೆ: ಎಷ್ಟು ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ:</td>
<td>ರಾಜ್ಯದಲ್ಲಿ ದಾಖಲಾದ ಪ್ರಕರಣಗಳ, ಆರೋಪಿಗಳ ಸಂಖ್ಯೆ ಹಾಗೂ ಪ್ರಕರಣದ ಪ್ರಸ್ತುತ ಹಂತದ ವಿವರ ಈ ಕೆಳಕಂಡಂತಿದೆ.
<table>
<tr><th>ನಗರ/ ಜಿಲ್ಲೆ</th><th>ದಾಖಲಾದ ಪ್ರಕರಣಗಳು</th><th>ಒಟ್ಟು ಆರೋಪಿಗಳ ಸಂಖ್ಯೆ</th><th>ಪ್ರಕರಣದ ಪ್ರಸ್ತುತ ಹಂತ</th></tr>
<tr><td>ಬೆಂಗಳೂರು ನಗರ</td><td>2</td><td>9</td><td>ತನಿಖಾ ಹಂತದಲ್ಲಿರುತ್ತದೆ.</td></tr>
<tr><td>ಶಿವಮೊಗ್ಗ</td><td>1</td><td>4</td><td>ಸಿಸಿನಂ. 1760/2021 ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ</td></tr>
<tr><td>ರಾಮನಗರ</td><td>1</td><td>3</td><td>ತನಿಖಾ ಹಂತದಲ್ಲಿರುತ್ತದೆ</td></tr>
</table>
</td>
</tr>
<tr>
<td>ಈ)</td>
<td>ನಕಲಿ ಛಾಪಾ ಕಾಗದ ಮತ್ತು ನಕಲಿ ಇ-ಸ್ಟ್ಯಾಂಪ್ ಪೇಪರ್‌ಗಳ ಮಾರಾಟ ದಂಧೆಯಲ್ಲಿ ಸರ್ಕಾರಿ ನೌಕರರು, ವಕೀಲರು ಭಾಗಿಯಾಗಿರುವುದು ನಿಜವೇ: ಅವರನ್ನು ವಿಚಾರಣೆಗೊಳಪಡಿಸಲಾಗಿದೆಯೇ: ಅವರುಗಳು ಯಾರ್‍ಯಾರು:</td>
<td rowspan="2">ಯಾವುದು ಇಲ್ಲ</td>
</tr>
<tr>
<td>ಉ)</td>
<td>ಸದರಿ ಆರೋಪಿಗಳ ವಿಚಾರಣೆ ಯಾವ ಹಂತದಲ್ಲಿದೆ: ಸದರಿ ಪ್ರಕರಣಗಳಲ್ಲಿ ಭಾಗಿಯಾಗಿದ್ದ ನೌಕರರು, ವಕೀಲರ ವಿರುದ್ಧ ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು)</td>
</tr>
</table>

HD 49 SDN 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು